ಅಭಿಯಾಚನೆ ಕ್ರಮಾಂಕ ಳಿಜಿ ೦೧–೩–೧೯೮೪ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಸ್ತೆಗಳ ಮತ್ತು ಸೇತುವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೪೭,೩೧,೦೦,೦೦೦ ರೂ ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨೧,೯೧,೮೦,೦೨೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಈ ಸಭೆಯು ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ ಳಿಟಿ ೩೧–೩–೧೯೮೪ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರೇವು ಮತ್ತು ಜನ ಸಾರಿಗೆ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧,೨೩,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೩,೫೫,೪೬,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಈ ಸಭೆಯು ಮಂಜೂರು ಮಾಡುವುದು

ಪ್ರಸ್ತಾವನೆ ಅಂಗೀಕೃತವಾಗಿ ಅಭಿಯಾಚನೆ ಕ್ರಮಾಂಕದಲ್ಲಿ ಕೇಳಿದ ಮೊತ್ತ ಹಣವನ್ನು ಮಂಜೂರು ಮಾಡಲಾಯಿತು

ಶ್ರೀ ಗೋವಿಂದ ಪಿ. ಒಡೆಯರಾಜ್.—ಮೊನ್ನೆ ಈ ವಿಷಯಂದಲ್ಲಿ ಚರ್ಚೆಯಾಗುವಾಗ ಮಾನ್ಯ ಸದಸ್ಯರಾದ ಬೈರೇಗೌಡರು ವ್ಯಕ್ತಿಶಃ ಒಂದು ಮಾತನ್ನು ಹೇಳಿದರು. ಅದು ನನ್ನ ಕಿವಿಗೆ ಆವತ್ತು ಬೀಳಲಿಲ್ಲ. ಆದರೆ ಅವರು ಆಡಿರತಕ್ಕ ಮಾತು ಸತ್ಯಕ್ಕೆ ದೂರವಾದುದು. ಅದನ್ನು ಸಂಪೂರ್ಣವಾಗಿ ನಾನು ಅಲ್ಲಗಳೆಯುತ್ತೇನೆ. ಯಾರೇ ಆಗಲಿ ಈ ರೀತಿ ವ್ಯಕ್ತಿತಃ ಮಾತುಗಳನ್ನು ಆಡಬಾರದು ಎಂದು ಹೇಳುತ್ತಾ ಮಾನ್ಯ ಬೈರೇಗೌಡರು ದುರುದ್ದೇಶಪೂರ್ವಕವಾಗಿ ಮಾತನಾಡಿದ್ದಾರೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಸಿ. ಬೈರೇಗೌಡ.—ಅವರು ಯಾವ ಅರ್ಥದಲ್ಲಿ ಈ ಕಡೆಯ ಸದಸ್ಯರನ್ನು ಕುರಿತು ಮಾತನಾಡಿದರೋ ಅದೇ ಅರ್ಥದಲ್ಲಿ ಅವರನ್ನು ಕುರಿತು ನಾನೂ ಮಾತನಾಡಿದೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ನಾನು ಮಾತನಾಡುವಾಗ ಬೈರೇಗೌಡರು ಏನೂ ಹೇಳಿಲ್ಲ. ಇದನ್ನು ಅವರು ನೆನಪಿನಲ್ಲಿಟ್ಟುಕೊಳ್ಳಬೇಕು.

ANNOUNCEMENT

Re. Demonstrator in the Visitors' Galleries

MR. SPEAKER.—Now I would like to make an announcement.

Any misconduct or infringement or gallery regulating laws has to be treated as a grave offence and contempt of the House punishable with imprisonment

As members are responsible for any untoward or undesirable thing in the Visitor's Gallery at the hands of a holder of a pass given at their request, the members should fully satisfy themselves about the person for whom such a card is required by them.

The demonstrators in today's incident at the Gallery have expressed their apology. The House may take a lenient view and accept their regret and let them off with strict warning.

Sri S. S. Kamble, Sri G. M. Kanade, Sri Shivamurthy and Sri R. C. Balekundargi have recommended for issue of passes to the persons who have shouted slogans in the Gallery today

As the demostrators have expressed their regret I think the matter can be closed and they may be released.

ಮಂತ್ರಿಗಳ ಹೇಳಿಕೆ

ವಿಷಯಂ.—ಗಮನ ಸೂಚನೆ ಹೇಳಿಕೆಯ ಮೇಲೆ ವಿಷದೀಕರಣ

ಅಧ್ಯಕ್ಷರು.—ಈಗ ಮಾನ್ಯ ಪಶುಸಂಗೋಪನಾ ಸಚಿವರು ತಮ್ಮ ಹೇಳಿಕೆಯನ್ನು ಸಭೆಯ ಮುಂದೆ ಇಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.—ಷಿಷಿಳಿನೇ ನಿಯಮವನ್ನು ಸಸ್ಪೆಂಡ್ ಮಾಡುವ ತೀರ್ಮಾನಕ್ಕೆ ಬಂದೇ ಈ ದಿವಸ ಇದನ್ನು ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಎಂ ವೀರಪ್ಪ ಮೊಯಿಲಿ.—ಅದರಲ್ಲಿ ಒಂದು ಅಂಡರ್‌ಸ್ಟ್ಯಾಂಡಿಂಗ್ ಇತ್ತು.

ಅಧ್ಯಕ್ಷರು.—ಹಿಂದೆ ಹೇಳಿದ್ದಕ್ಕೆ ಉತ್ತರ ಕೊಡಲಿ. ತಾವೇ ಇದನ್ನು ತೀರ್ಮಾನ ಮಾಡಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ತೀರ್ಮಾನಕ್ಕೆ ನಾವು ಬದ್ಧರಾಗಿದ್ದೇವೆ. ಉತ್ತರ ಆದಮೇಲೆ there was a gentleman agreement that if the matter is inevitable we can raise it...

ಅಧ್ಯಕ್ಷರು.—ಮಾನ್ಯ ಯಡಿಯೂರಪ್ಪ ಮತ್ತು ಅನೇಕ ಜನ ಸದಸ್ಯರು ಕಳುಹಿಸಿರುವ ನೋಟೀಸಿಗೆ ಮಂತ್ರಿಗಳು ಉತ್ತರ ಹೇಳುತ್ತಾರೆ. ದಿನಾಂಕ ೨೪-೮-೮೩ರಂದು ಎತ್ತಿದ ವಿಷಯಕ್ಕೆ ಷಿಷಿಳಿನೇ ನಿಯಮದ ಪ್ರಕಾರ ಮಂತ್ರಿಗಳಿಂದ ಉತ್ತರ ಬರುತ್ತದೆ. ಆದಾದನಂತರ ಮುಂದಿನ ಕಲಾಪಕ್ಕೆ ಹೋಗೋಣ

ಶ್ರೀ ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳ ಲಿಖಿತ ಹೇಳಿಕೆ ಇಲ್ಲಿದೆ.

ಅಧ್ಯಕ್ಷರು.—ಸಮಾಧಾನದಿಂದಿರಿ.

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—(ಮಾನ್ಯ ಕೋಟಗಾರಿಕೆ ಮತ್ತು ಪಶುಸಂಗೋಪನಾ ಸಚಿವರು)

ಮಾನ್ಯ ಅಧ್ಯಕ್ಷರೆ, ದಿನಾಂಕ ೨೪-೮-೮೩ರಂದು ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಬಿ. ಎಸ್. ಯಡಿಯೂರಪ್ಪ, ಧನಂಜಯಕುಮಾರ್ ಕೆ. ವಸಂತ ಬಂಗೇರ ಮತ್ತು ರುಕ್ಕಯ್ಯ ಪೂಜಾರಿ.—ಇವರುಗಳು ಎತ್ತಿದ ಗಮನ ಸೆಳೆಯುವ ಸೂಚನೆ, ಬಗ್ಗೆ ಈ ಕೆಳಕಂಡ ಸ್ಪಷ್ಟೀಕರಣವನ್ನು ಸಭೆಯ ಮುಂದೆ ಇಡಬಯಸುತ್ತೇನೆ.

ದಿನಾಂಕ.—೨೪—೮—೮೩ ರಂದು ಮೇಲಿನ ಗಮನ ಸೆಳೆಯುವ ಸೂಚನೆ ಬಗ್ಗೆ ಹೇಳಿಕೆ ನೀಡುವಾಗ ನಾನು ಮಾತು ಕೊಟ್ಟಂತೆ ಕೆಲವೊಂದು ವಿಶದೀಕರಣವನ್ನು ಈ ಮೂಲಕ ಸದನದ ಮುಂದೆ ಇಡಬಯಸುತ್ತೇನೆ.

ಮೊದಲು ಹೇಳಿಕೆ ಕೊಟ್ಟಿದ್ದಂತೆ ತೋಟಗಾರಿಕಾ ಇಲಾಖಾ ನಿರ್ದೇಶಕರಿಂದ ಅಡಿಕೆ ಯೋಜನೆಯಲ್ಲಿ ಬಿಡಂಗಡೆಯಾದ ೬೦, ೭೫೦ ರೂ. ಗಳಲ್ಲಿ ತೀರ್ಥಹಳ್ಳಿ ತೋಟಗಾರಿಕಾ ಕ್ಷೇತ್ರಕ್ಕೆ ೫೮, ೨೫೦ ರೂ. ಒದಗಿಸಿದ್ದು ೬ ತಿಂಗಳ ಅಂತ್ಯದವರೆಗೆ ಅಂದರೆ (ಸೆಪ್ಟೆಂಬರ್ ೮೩ರ ಅಂತ್ಯದ ವರೆಗೆ) ಈ ಕ್ಷೇತ್ರದ ಎಲ್ಲಾ ಖರ್ಚಿಗೆ ದೊರಕಿದೆ ಈ ಮೊತ್ತದಲ್ಲಿ ರೂ. ೨೭,೬೮೪.೧೫ನ್ನು ೧೯೮೨—೮೩ನೇ ವರ್ಷದ ೩ ತಿಂಗಳ ಬಾಕಿ ವೇತನ ಮತ್ತು ಕೂಲಿಯ ವೆಚ್ಚದ ಬಾಬ್ತು ಖರ್ಚಾಗಿದ್ದು ಕಂಡುಬರುತ್ತದೆ. ಆದರಿಂದಾಗಿ ೧೯೮೩—೮೪ನೇ ಸಾಲಿನ ವೇತನ ಮತ್ತು ದಿನಗೂಲಿಯನ್ನು ಪೂರ್ಣವಾಗಿ ನೀಡಲು ತೊಂದರೆಯಾಗಿರುವುದು ಕಂಡುಬರುತ್ತದೆ. ಆದಾಗ್ಯೂ ಇಲಾಖೆ ನಿರ್ದೇಶಕರು ಈಗಾಗಲೇ ಈ ಕೊರತೆಯನ್ನು ನೀಗಲು ೮೪ ೧೦೮ ರೂ. ಗಳನ್ನು ಬಿಡುಗಡೆ ಮಾಡಿದ್ದು ಇದರಿಂದಾಗಿ ಸೆಪ್ಟೆಂಬರ್ ೧೯೮೩ರ ತನಕ ದಿನಗೂಲಿ ಮತ್ತು ವೇತನ ಭತ್ಯೆಗಳನ್ನು ನೀಡಲು ಯಾವ ತೊಂದರೆಯೂ ಇರುವುದಿಲ್ಲ.